| | | |
|---|---|---|
| ಸಿ ಸಿ ನಂ: | | 193/2017 |
| ಚಾಸಾ | 1 ಪ್ರಾಸಾ | 1 |
| ದಿನಾಂಕ: | | 15.07.2022 |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ವಿಠ್ಠಲ |
| ತಂದೆಯ ಹೆಸರು | ಅಣ್ಣಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಸಾ: ನರಗುಂದ |

<u>ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರಿಂದ</u>

ಚಾಸಾ 1 ರವರು ಪರಿಚಯ ಇರುವುದಿಲ್ಲ. ಚಾಸಾ 3 ನನ್ನ ಗೆಳೆಯ. ಚಾಸಾ 8 ರವರು ಪರಿಚಯ ಇರುವುದಿಲ್ಲ. ಆರೋಪಿತನು ಮತ್ತು ನಾನು ಒಂದೇ ಓಣಿಯಲ್ಲಿರುತ್ತೇವೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇರುವುದಿಲ್ಲ. ಈಗ ಸುಮಾರು 4 ವರ್ಷದ ಹಿಂದೆ ಪೊಲೀಸರು ನಾನು ನನ್ನ ಹೋಲಕ್ಕೆ ಹೋಗುತ್ತಿದ್ದಾಗ ನನ್ನನ್ನು ಠಾಣೆಗೆ ಕರೆಯಿಸಿ ಒಂದು ಹಾಳೆಯಲ್ಲಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆದರೆ ಸದರಿ ಹಾಳೆಯಲ್ಲಿ ಏನು ಬರೆದಿರುತ್ತದೆ ಎಂದುನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಯಾವುದೆ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೆ ಮುದ್ದೇಮಾಲನ್ನು ಜಪ್ತ ಮಾಡಿರುವುದಿಲ್ಲ. ಸಾಕ್ಷಿಯ ಸಹಿ ಇರುವ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ತಾನು ಸಹಿಯನ್ನು ಗುರುತಿಸಿದ್ದು ದಾಖಲೆಯನ್ನು ಗುರುತಿಸಿರುವುದಿಲ್ಲ. ಸಾಕ್ಷಿಯ ಸಹಿ ಇರುವ ದಾಖಲೆಯು ಅದನ್ನು ನಿಪಿ 4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 4(ಎ) ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಪ್ರಾರ್ಥಿಸಿಕೊಂಡರು, ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು ಕಾರಣ ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಮಾನ್ಯ ಸಸಅ ರವರಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ  ಮಾನ್ಯ ಸಸಅ ರವರಿಂದ</u>

ದಿನಾಂಕ **06.05.2014** ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ **3** ರವರನ್ನು ಶಿಶು ಯೋಜನಾಧಿಕಾರಿಯವರ ಕಚೇರಿಗ ನರಗುಂದ ಕರೆಯಿಸಿ ಮಧ್ಯಾಹ್ನ **01.00** ಗಂಟೆಯಿಂದ **02.00** ಗಂಟೆಯ ಅವಧಿಯಲ್ಲಿ ಆರೋಪಿ ಇವಳು ಚಿನಿವಾಳಗಟ್ಟಿ ಓಣಿಯಲ್ಲಿ ಬರುವ ಅಂಗನವಾಡಿ ಸಹಾಯಕಿ ಹುದ್ದೆಗೆ ಆಯ್ಕೆ ಬಯಸಿ ದಿನಾಂಕ **05.06.2014** ರಂದು ತನ್ನ ಶಾಲೆಯ **1** ನೇ ತರಗತಿಯ ದಾಖಲಾತಿಯನ್ನು **4** ನೇ ತರಗತಿ ಅಂತಾ ತಿದ್ದುಪಡಿ ಮಾಡಿರುತ್ತಾಳೆ ಎಂದು ನಮ್ಮ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಪೊಲೀಸರು ನನ್ನ ಹಾಗೂ ಚಾಸಾ **3** ರವರ ಸಮಕ್ಷಮ ನಿಪಿ **4** ರಂತೆ ಪಂಚನಾಮೆಯನ್ನು ಮಾಡಿದ್ದರೂ ಸಹ ಆರೋಪಿತಿಳಿಗೆ ಸಹಾಯವಾಗಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ **4** ರಲ್ಲಿರುವ ಎಲ್ಲ ವಿಷಯವು ನನಗೆ ಗೊತ್ತಿದ್ದರೂ ಸಹ ಆರೋಪಿತಳು ನಮ್ಮ ಓಣಿಯವರು ಆಗಿದ್ದರಿಂದ ಅವರಿಗೆ ಸಹಾಯವಾಗಬೇಕೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಜೆ ಸಿ ಬಿ  ವಕೀಲರು ಏನೂ ಇಲ್ಲವೆಂದು ನುಡಿಯುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಿಂದ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾಯಾಧೀಶರು, ನರಗುಂದ.